# ಸಾರಾ ಅಬೂಬಕ್ಕರ್ ಕಾದಂಬರಿಗಳಲ್ಲಿ – ಸ್ತ್ರೀ ಶಿಕ್ಷಣದ ಮಹತ್ವ

**ಮಂಜು ಸಿ.ಎಸ್.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.

DOI: https://doi.org/10.5281/zenodo.15791341

## ABSTRACT:

ಸಮಾಜ ಮತ್ತು ದೇಶದ ಅಭಿವೃದ್ಧಿಗೆ ಶಿಕ್ಷಣ ಬಹಳ ಮುಖ್ಯ. ಶಿಕ್ಷಣ ಪಡೆದ ವ್ಯಕ್ತಿ ತನ್ನ ಕುಟುಂಬ ಮತ್ತು ಸಮಾಜದಲ್ಲಿ ಉತ್ತಮ ಬದಲಾವಣೆಗಳನ್ನು ತರಲು ಸಾಧ್ಯವಾಗುತ್ತದೆ. ಅಲ್ಲದೆ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿಯೂ ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ. ಸಮಾಜದಲ್ಲಿ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ತರಲು ಶಿಕ್ಷಣ, ಅದರಲ್ಲೂ ಸ್ತ್ರೀ ಶಿಕ್ಷಣ ಅತ್ಯಗತ್ಯವಾಗಿದೆ. ಶಿಕ್ಷಣ ಪಡೆದ ಮಹಿಳೆಯು ಉದ್ಯೋಗಾವಕಾಶಗಳನ್ನು ಪಡೆದು ಆರ್ಥಿಕವಾಗಿ ಸ್ವಾವಲಂಬಿಯಾಗುತ್ತಾಳೆ. ಇದು ಮಹಿಳಾ ಸಬಲೀಕರಣಕ್ಕೆ ಒಂದು ಪ್ರಮುಖ ಹೆಜ್ಜೆಯಾಗಿದೆ. ಸ್ತ್ರೀ ಶಿಕ್ಷಣವು ಸಮಗ್ರ ಸಮಾಜದ ಅಭಿವೃದ್ಧಿಗೆ ಅತ್ಯಗತ್ಯವಾಗಿದೆ. ಇದು ಕೇವಲ ಮಹಿಳೆಯೊಬ್ಬಳ ಜೀವನವನ್ನು ಬದಲಾಯಿಸುವುದಿಲ್ಲ, ಇಡೀ ಸಮಾಜದ ಭವಿಷ್ಯವನ್ನು ರೂಪಿಸುತ್ತದೆ. ಸಾರಾ ಅಬೂಬಕ್ಕರ್ ಅವರು ತಮ್ಮ ಕಾದಂಬರಿಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳುತ್ತಾರೆ. ಇವರ ಕಾದಂಬರಿಗಳಲ್ಲಿ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗುವ ಪರಿಸ್ಥಿತಿಗಳನ್ನು ಚಿತ್ರಿಸಲಾಗಿದೆ. ಹೆಣ್ಣು ಮಕ್ಕಳು ಶಿಕ್ಷಣ ಪಡೆದು ಸ್ವತಂತ್ರವಾಗಿ ಬದುಕಬೇಕು ಎಂಬುದನ್ನು ಸಾರಾ ಬಯಸುತ್ತಾರೆ. ತಮ್ಮ ಕೃತಿಗಳಲ್ಲಿ ಶಿಕ್ಷಣದ ಮಹತ್ವವನ್ನು ಚಿತ್ರಿಸುವ ಮೂಲಕ ಸಮಾಜದಲ್ಲಿ ಹೆಣ್ಣು ಮಕ್ಕಳ ಸ್ಥಾನಮಾನವನ್ನು ಸುಧಾರಿಸಲು ಪ್ರಯತ್ನಿಸುತ್ತಾರೆ.

## KEYWORDS:

ಸಮಾಜ, ಸ್ತ್ರೀ ಶಿಕ್ಷಣ, ಚಂದ್ರಗಿರಿಯ ತೀರದಲ್ಲಿ, ಸಹನಾ, ಮುಸ್ಲಿಂ ಸಮುದಾಯ.

ಜೀವನದಲ್ಲಿ ಯಶಸ್ವಿ ವ್ಯಕ್ತಿಯಾಗುವುದು ಎಲ್ಲಕ್ಕಿಂತ ಮೊದಲು ನಮ್ಮ ಆದ್ಯತೆ ಆಗಬೇಕು. "ಏನಾದರೂ ಆಗು ಮೊದಲು ನೀ ಮಾನವನಾಗು" ಎಂಬ ಕವಿವಾಣಿಯಂತೆ ಮನುಷ್ಯನಾಗಲು ಶಿಕ್ಷಣ ಅವಶ್ಯಕ. ಒಬ್ಬರ ಜೀವನ ಸುಧಾರಿಸಲು, ಬದಲಿಸಲು, ಉನ್ನತಿಯೆಡೆಗೆ ಕೊಂಡೊಯ್ಯಲು ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಶಿಕ್ಷಣವು ವ್ಯಕ್ತಿಯ ಜೀವನದ ಗುಣಮಟ್ಟವನ್ನು ಖಂಡಿತವಾಗಿ ನಿರ್ಧರಿಸುತ್ತದೆ. ಜ್ಞಾನ, ಕೌಶಲ್ಯಗಳನ್ನು ಬೆಳೆಸುತ್ತದೆ. ವ್ಯಕ್ತಿತ್ವದ ಮೇಲೆ ಪರಿಣಾಮ ಬೀರುತ್ತದೆ. "ಶಿಕ್ಷಣ ಎಂಬುದು ಹುಲಿಯ ಹಾಲಿದ್ದಂತೆ ಅದನ್ನು ಕುಡಿದವರು ಘರ್ಜಿಸಲೇಬೇಕು" ಎಂಬ

ಅಂಬೇಡ್ಕರ್ ಮಾತಿನಂತೆ ಶಿಕ್ಷಣವು ಜನರನ್ನು ಪ್ರಬುದ್ಧರನ್ನಾಗಿ ಮಾಡುತ್ತದೆ. ನಾಗರಿಕತೆಯೆಡೆಗೆ ಕೊಂಡೊಯ್ಯುತ್ತದೆ. ಈ ಯುಗದಲ್ಲಿ ವ್ಯಕ್ತಿಯನ್ನು ಉತ್ತಮ ತಂತ್ರಜ್ಞಾನದ ಬಳಕೆದಾರನನ್ನಾಗಿ ರೂಪಿಸುತ್ತದೆ.

ಸಾರಾ ಅಬೂಬಕ್ಕರ್ ಕನ್ನಡ ನಾಡಿನ ಖ್ಯಾತ ಬರಹಗಾರ್ತಿ, ಕಥೆಗಾರ್ತಿ, ಕಾದಂಬರಿಗಾರ್ತಿಯಾಗಿ ಮುಸ್ಲಿಂ ಸಮುದಾಯದ ಒಂದು ಭಾಗವೇ ಆಗಿದ್ದು, ಸಮುದಾಯದ ಹುಳುಕುಗಳನ್ನೇ ಬಿಚ್ಚಿಟ್ಟ ಸಾರಾ ಅವರ ಹಾದಿ ಹೂವಿನದೇನೂ ಆಗಿರಲಿಲ್ಲ. ಪ್ರೋತ್ಸಾಹದ ಜತೆಗೆ ಆಗಾಗ ಕಟು ಪ್ರತಿರೋಧ ಎದುರಿಸಿದ ಕಹಿ ಅನುಭವವೂ ಸಾಕಷ್ಟಿದೆ. ಹಾಗಾಗಿ ಅವರ ಲೇಖನಿಯೊಂದಿಗಿನ ನಿರಂತರ ಹೋರಾಟವನ್ನು ಅನೇಕ ಕೃತಿಗಳಲ್ಲಿ ಕಾಣುತ್ತೇವೆ. ಶಿಕ್ಷಣದ ಪ್ರಾಮುಖ್ಯತೆ, ಸಾಮಾಜಿಕ ಕಳಕಳಿ, ಮಾನವೀಯ ಅಂತಃಕರಣದ ಸಂಬಂಧ ಮುಸ್ಲಿಂ ಬದುಕಿನ ಚಿತ್ರಣ ಇತ್ಯಾದಿ ಸಾರಾ ಅವರ ಸಾಹಿತ್ಯದ ತಿರುಳು. ಶಿಕ್ಷಣ ಪ್ರತಿಯೊಬ್ಬರಿಗೂ ಸಿಗಬೇಕು. ಅದರಲ್ಲೂ ಹೆಣ್ಣು ಮಕ್ಕಳಿಗೆ ದೊರಕಬೇಕೆಂದು ನಿರಂತರವಾಗಿ ಪ್ರತಿಪಾದಿಸುವ ಸಾರಾ ಅಬೂಬಕ್ಕರ್, ಹೆಣ್ಣು ಮಕ್ಕಳು ಪ್ರಾಣಿಗಳು, ಹೆರಲು ಇರುವ ಯಂತ್ರಗಳು ಎಂದು ಬಿಂಬಿಸಿರುವ ಸಮಾಜ ನಮ್ಮದು. ಇಸ್ಲಾಂನ ಮೂಲದಲ್ಲಿ ಹೆಣ್ಣಿಗೆ ಅಪಾರ ಗೌರವವಿದೆ. ಆದರೆ ಸೌದಿ ಅರೇಬಿಯಾ ಮೂಲದ 'ವಹಾದಿಸಂ' ಅನ್ನು ಮುಂದಿಟ್ಟುಕೊಂಡು ಈಗೀಗ ವಿಶ್ವದ ನಾನಾ ಭಾಗಗಳಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಬಾರದು ಎಂದೆಲ್ಲಾ ವಾದಿಸುತ್ತಿದ್ದಾರೆ.

ಮಹಿಳೆಗೆ ಶಿಕ್ಷಣ ಸಿಗಬೇಕು, ಅದರಲ್ಲೂ ತಾಯಂದಿರಿಗೆ ಅಕ್ಷರಜ್ಞಾನವಿರಬೇಕು ಎಂದು ಸಾರಾ ಸ್ಪಷ್ಟಪಡಿಸುತ್ತಾರೆ. ಸ್ತ್ರೀ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ಇವರು ಮುಸ್ಲಿಂ ಮಹಿಳೆಯು ಶಿಕ್ಷಣ ಪಡೆಯಲೇಬೇಕಾದ ಅನಿವಾರ್ಯತೆಯನ್ನು ತಮ್ಮ ಬರಹಗಳಲ್ಲಿ ಚರ್ಚಿಸಿದ್ದಾರೆ. ಮಹಿಳೆಯರಲ್ಲಿ ಶೋಷಣೆಯ ಅರಿವು ಉಂಟಾಗಲು, ಶೋಷಣೆಯ ವಿರುದ್ಧ ಧ್ವನಿ ಎತ್ತಲು ಸ್ತ್ರೀ ಶಿಕ್ಷಣ ಸಹಕಾರಿಯಾಗುತ್ತದೆಂಬುದನ್ನು ಸಾರಾ ಅವರು ಅನೇಕ ಕೃತಿಗಳಲ್ಲಿ ಬಿಂಬಿಸಿದ್ದಾರೆ.

**ಚಂದ್ರಗಿರಿ ತೀರದಲ್ಲಿ:**

'ಚಂದ್ರಗಿರಿ ತೀರದಲ್ಲಿ' ಕಾದಂಬರಿಯಲ್ಲಿ ನಾದಿರಾಳು ನಾಲ್ಕಕ್ಷರ ಕಲಿತು ತನ್ನ ಅನುಪಸ್ಥಿತಿಯಲ್ಲಿ ಕಾಗದವನ್ನಾದರೂ ಬರೆಯುವಷ್ಟು ಸಶಕ್ತಳಾಗಲಿ ಎಂಬ ಆಸೆಯಿಂದ ಆಕೆಯ ಗಂಡ ರಸೀದ್ ನಾದಿರಾಳಿಗೆ ಓದಲು ಬರೆಯಲು ಕಲಿಸುವುದಕ್ಕೆ ಮುಂದಾಗುತ್ತಾನೆ. ಈ ಸಂದರ್ಭದಲ್ಲಿ ಅವನ ತಾಯಿ "ಹೆಂಗಸರು ಓದು ಬರಹ ಕಲಿತು ಏನು ಮಾಡಬೇಕಾಗಿದೆ"[1] ಎಂದು ಹೇಳುತ್ತಾಳೆ. ಈ ಮಾತು ನಾದಿರಳ ಅಲ್ಪಮಟ್ಟಿಗಿನ ಆಸಕ್ತಿಗೂ ತಣ್ಣೀರೆರಚಿದಂತಾಗುತ್ತದೆ. ಕೊನೆಗೆ ತನ್ನ ಗಂಡ ಜೊತೆಯಲ್ಲಿ

ಇಲ್ಲವಾದಾಗ ಅವನನ್ನು ಹೇಗಾದರೂ ಸಂಪರ್ಕಿಸಲೇಬೇಕೆಂಬ ಹಂಬಲ ನಾದಿರಾಳಿಗೆ ಶಿಕ್ಷಣದ ಅಗತ್ಯತೆಯ ಅರಿವು ಉಂಟಾಗಲು ಕಾರಣವಾಗುತ್ತದೆ. ಪತ್ರದ ಮುಖೇನ ಗಂಡನೊಂದಿಗೆ ತನ್ನ ಪರಿಸ್ಥಿತಿಯನ್ನು ಹೇಳಿಕೊಳ್ಳುವಂತಿದ್ದರೆ ಬಹುಶಃ ನಾದಿರಾಳು ಗಂಡನ ದುಡುಕಿನಿಂದ ತಲಾಖ್ ಹೊಂದುತ್ತಿರಲಿಲ್ಲ ಎಂಬುದನ್ನು ಈ ಕಾದಂಬರಿ ವ್ಯಕ್ತಪಡಿಸುತ್ತದೆ.

ಸ್ತ್ರೀ ಶಿಕ್ಷಣಕ್ಕೆ ಸಮಾಜದಲ್ಲಿ ಹೆಚ್ಚಿನ ಬೆಂಬಲವಿಲ್ಲ. ಅದರಲ್ಲೂ ಮುಸ್ಲಿಂ ಹೆಣ್ಣು ಮಕ್ಕಳು ಶಿಕ್ಷಣ ಪಡೆಯಬೇಕಾದರೆ ಆಕೆ ತನ್ನ ಸುತ್ತಲಿನ ವ್ಯವಸ್ಥೆಯನ್ನೇ ಎದುರು ಹಾಕಿಕೊಳ್ಳಬೇಕಾಗುತ್ತದೆ. ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ಪರಿಸ್ಥಿತಿ ಅಲ್ಪಮಟ್ಟಿಗೆ ಸುಧಾರಿಸಿದ್ದಾಗಿಯೂ, ಸಂಪೂರ್ಣವಾಗಿ ಸ್ತ್ರೀ ಶಿಕ್ಷಣದ ಮಹತ್ವವನ್ನು ಎತ್ತಿಹಿಡಿದಿದೆ ಎಂಬುದು ಸತ್ಯಕ್ಕೆ ದೂರವಾಗಿದೆ. ಸಾರಾ ಅವರ ಪ್ರಾರಂಭಿಕ ಬರಹಗಳಲ್ಲಿ ಚಿತ್ರಣಗೊಂಡಿರುವಂತೆ ಮುಸ್ಲಿಂ ಹೆಣ್ಣು ಮಕ್ಕಳಿಗೆ ಓದು ಬರಹದ ಅಗತ್ಯವಿದ್ದುದು 'ಖುರ್‌ಆನ್' ಪಠಣೆಗೆ ಮಾತ್ರ. ಹೀಗಾಗಿಯೇ 'ಖುರ್‌ಆನ್' ಓದಿ ನಮಾಜ್ ಮಾಡಲು ಕಲಿತ ತಕ್ಷಣ ಆ ಹೆಣ್ಣು ಮಕ್ಕಳ ಶಿಕ್ಷಣವನ್ನು ಅಲ್ಲಿಗೆ ಕೊನೆಗೊಳಿಸಲಾಗುತ್ತಿತ್ತು.

**ಸಹನಾ:**

'ಸಹನಾ' ಕಾದಂಬರಿಯೂ ಕೂಡ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. ಸಕೀನಾ ತನ್ನ ಮಗಳಿಗೆ ಶಿಕ್ಷಣ ಕೊಡಿಸುವ ಕುರಿತು "ನಮ್ಮಂತಹವರೆಲ್ಲಾ ಓದಿ ಏನು ಮಾಡಬೇಕಾಗಿದೆ? ನಾವೇನು ಸರ್ಕಾರಿ ಕೆಲಸಕ್ಕೆ ಹೋಗುತ್ತೇವೆಯೇ? ಓದಲು ಬರೆಯಲು ಕಲಿತರೆ ಧಾರಾಳ ಸಾಕು".[2] ಈ ಕಾದಂಬರಿಯಲ್ಲಿ ಕಂಡುಬರುವಂತೆ ತಾನು ಹೋದೆಡೆಯಲೆಲ್ಲಾ ಮಗಳು ಬಂದು ತೊಂದರೆ ಕೊಡದಿರಲೆಂದು, ಖುರ್‌ಆನ್ ಕಲಿತು ಚೆನ್ನಾಗಿ ನಮಾಜ್ ಮಾಡಲೆಂದು ಸಕೀನಾ ತನ್ನ ಮಗಳನ್ನು ಮನೆ ಬಳಿಯ ಶಾಲೆಗೆ ಕಳುಹಿಸುತ್ತಾಳೆ. ಹೆಣ್ಣು ಸುಶಿಕ್ಷಿತಳಾದರೆ ಸಮಾಜದಲ್ಲಿ ತನ್ನ ಘನತೆ-ಗೌರವವನ್ನು ಕಾಪಾಡಿಕೊಳ್ಳಬಲ್ಲಳು ಎಂಬ ವಾಸ್ತವಿಕ ಸಂಗತಿ ಈ ಕಾದಂಬರಿಯಲ್ಲಿ ಅರಿವಾಗುತ್ತದೆ.

**ಕದನವಿರಾಮ:**

'ಕದನವಿರಾಮ' ಅನ್ನುವ ಮತ್ತೊಂದು ಕಾದಂಬರಿಯಲ್ಲಿ ನಿರ್ಮಲಾದೇವಿ ಶಿಕ್ಷಣ ಪಡೆಯುವ ಎಲ್ಲಾ ಸೌಕರ್ಯಗಳು ಇದ್ದಾಗಿಯೂ ಬಸ್ ಪ್ರಯಾಣ ಮಾಡಿ ದೂರದ ಊರಿನಲ್ಲಿ ಶಿಕ್ಷಣ ಪಡೆಯಬೇಕೆಂಬ ಕಾರಣಕ್ಕೆ ಪ್ರೌಢಶಾಲಾ ಹಂತಕ್ಕೆ ತನ್ನ ಓದನ್ನು ನಿಲ್ಲಿಸುವ ಪ್ರಸಂಗ ಈ ಕಾದಂಬರಿಯಲ್ಲಿ ಕಂಡುಬಂದಿದೆ. ಆದರೆ ಮದುವೆಯ ನಂತರದಲ್ಲಿ ಗಂಡನ ಆರ್ಥಿಕ ಬಿಕ್ಕಟ್ಟಿನಿಂದ ತಾನೂ ಎಲ್ಲಾದರೂ ಉದ್ಯೋಗ ಮಾಡುವಂತಿದ್ದರೆ ಎಂಬ ಆಲೋಚನೆ ನಿರ್ಮಲಾಳ ಮನಸ್ಸಿನಲ್ಲಿ

ಹುಟ್ಟುತ್ತದೆ. ಆದರೆ ಶಿಕ್ಷಣವಿಲ್ಲದೆ ಉದ್ಯೋಗ ದೊರಕಲಾರದ ಸ್ಥಿತಿ ಆಕೆಯು ಹೇಳುವ "ಪದವೀಧರರ ನಿರುದ್ಯೋಗಿಗಳು ತುಂಬಿದ ಈ ನಾಡಿನಲ್ಲಿ ಕೇವಲ ಪ್ರೌಢಶಾಲಾ ಶಿಕ್ಷಣ ಮುಗಿಸಿದಾಕೆಗೆ ಯಾವ ಉದ್ಯೋಗವಿದೆ? ತಾನೋರ್ವ ಪದವೀಧರೆಯಾಗಿ ಒಂದು ಉದ್ಯೋಗ ದೊರಕಿಸಿಕೊಳ್ಳುವ ಸಾಧ್ಯತೆಯಿದ್ದಿದ್ದರೆ ತಾನು ಬದುಕಿನಲ್ಲಿ ಈ ರೀತಿಯ ಸೋಲನ್ನನುಭವಿಸಬೇಕಾಗಿರಲಿಲ್ಲ"[3] ಮಾತು ಸ್ತ್ರೀ ಶಿಕ್ಷಣದ ಮಹತ್ವವನ್ನು ತಿಳಿಸುತ್ತದೆ. ಉನ್ನತ ಶಿಕ್ಷಣವನ್ನು ಮಹಿಳೆಯರು ಪಡೆಯಬೇಕೆಂಬ ಆಶಯ ಇದಾಗಿದೆ.

**ಇಳಿಜಾರು:**

'ಇಳಿಜಾರು' ಸಾರಾ ಅಬೂಬಕ್ಕರ್ ಅವರ ಅತ್ಯುತ್ತಮ ಕಾದಂಬರಿಗಳಲ್ಲೊಂದು. ಈ ಕಾದಂಬರಿಯಲ್ಲಿನ ರಶೀದಾ ತನ್ನ ಮಗನಿಗೆ ಹೆಣ್ಣು ತರುವ ಸಂದರ್ಭದಲ್ಲಿ ಸೊಸೆಯಾಗುವವಳು ಪದವಿಯನ್ನು ಪಡೆದವಳಾಗಿರಬೇಕೆಂದು ಹಠ ಮಾಡುತ್ತಾಳೆ. ಈ ಕುರಿತು ರಶೀದಾ "ವಿದ್ಯೆ ಇಲ್ಲದೆ ನಾನು ನರಳಿದ್ದು ಸಾಕು, ನನ್ನ ಮನೆಗೆ ಬರುವ ಯಾವ ಹೆಣ್ಣು ಈ ರೀತಿ ನರಳುವಂತಾಗಬಾರದು. ಅವನೊಡನೆ ಫ್ಯಾಕ್ಟರಿಗೆ ಹೋಗಿ ಅದರ ಕೆಲಸ ಕಾರ್ಯಗಳಲ್ಲಿ ಕೈ ಜೋಡಿಸುವಂತಹಳಾಗಿರಬೇಕು"[4] ಎಂದು ಹೇಳುವ ಮಾತು ಸಮಾಜದಲ್ಲಿ ಗಂಡನೊಂದಿಗೆ ಹೆಣ್ಣು ಸಮಾನತೆಯಿಂದ ಬದುಕಲು ಶಿಕ್ಷಣ ಅತ್ಯಗತ್ಯ ಎಂಬುದನ್ನು ಮನದಟ್ಟು ಮಾಡಿಸುತ್ತದೆ. ಇದೇ ಕಾದಂಬರಿಯಲ್ಲಿ ರಮ್ಲಾಬಿಯು ತನ್ನ ಮಗಳು ಕಾಲೇಜು ಹಂತದ ವಿದ್ಯಾಭ್ಯಾಸ ಪಡೆಯುವುದರ ಕುರಿತು ಅಸಮಾಧಾನ ವ್ಯಕ್ತಪಡಿಸಿದಾಗ ರಶೀದಾ ಹೇಳುವ "ಈಗ ಹೆಣ್ಣು ಮಕ್ಕಳಿಗೂ ಚೆನ್ನಾಗಿ ವಿದ್ಯಾಭ್ಯಾಸ ಕೊಡಿಸಬೇಕು. ಹೊರಗಿಳಿಯದೆ ಮನೆಯೊಳಗೆ ಕುಳಿತು ನಮ್ಮನ್ನು ವಂಚಿಸುವುದು ನಮ್ಮ ಗಂಡಸರಿಗೆ ಬಹಳ ಸುಲಭವಾಗಿ ಬಿಟ್ಟಿದೆ"[5] ಎಂಬ ಮಾತುಗಳಲ್ಲಿ ಶಿಕ್ಷಣ ಪಡೆದ ಹೆಣ್ಣು ಮಕ್ಕಳು ಗಂಡಸರ ಮೋಸದ ಬಲೆಗೆ ಸುಲಭವಾಗಿ ಸಿಲುಕಲಾರರೆಂಬ ಆಶಯವಿದೆ. ಶಿಕ್ಷಣವಿಲ್ಲದೆ ತಾವು ಅನುಭವಿಸಿದ ಕಷ್ಟಗಳನ್ನು ತಮ್ಮ ಮಕ್ಕಳು ಮತ್ತು ಇತರರು ಅನುಭವಿಸದಿರಲಿ ಎಂಬ ಕಾರಣಕ್ಕೆ ತಮ್ಮ ಶ್ರಮದ ಪ್ರತಿಫಲವನ್ನು ಮಕ್ಕಳ ಶಿಕ್ಷಣಕ್ಕಾಗಿಯೇ ಖರ್ಚು ಮಾಡಿ ಅವರ ಬದುಕು ಹಸನಾಗಬೇಕೆಂದು ಪ್ರಯತ್ನ ಪಡುವ ಮಹಿಳಾ ಪಾತ್ರಗಳನ್ನು ಸಾರಾ ಅಬೂಬಕ್ಕರ್ ಅವರ ಸಾಹಿತ್ಯದಲ್ಲಿ ಕಾಣುತ್ತೇವೆ.

**ಸುಳಿ:**

'ಸುಳಿ' ಕಾದಂಬರಿಯಲ್ಲಿನ ರುಖ್ಯಾಬಿ ನಡು ನೀರಿನಲ್ಲಿ ಬಿಟ್ಟು ಹೋದ ಗಂಡನ ಕುರಿತು ಯಾವುದೇ ವಿಷಯ ತಿಳಿಯದಿದ್ದ ಪಕ್ಷದಲ್ಲೂ ತಾನು ಕಂಡವರ ಮನೆಯಲ್ಲಿ ಕೆಲಸ ಮಾಡಿ ಬಂದದ್ದರಲ್ಲಿ ಅರೆಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರೂ ಸಹ

ತನ್ನ ಮಗಳನ್ನು ಶಾಲೆಗೆ ಕಳುಹಿಸಲು ಮುಂದಾಗುತ್ತಾಳೆ. ತನ್ನಂತೆ ಮಗಳು ಕಷ್ಟಪಡಬಾರದೆಂಬ ಕಾಳಜಿ ಈಕೆಯಲ್ಲಿದೆ. ಅದಕ್ಕೆ ಹೇಳುವುದು 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ.'

**ತಳ ಒಡೆದ ದೋಣಿಯಲ್ಲಿ:**

'ತಳ ಒಡೆದ ದೋಣಿಯಲ್ಲಿ' ಅನ್ನುವ ಕಾದಂಬರಿ ಕೂಡ ಸ್ತ್ರೀ ಶಿಕ್ಷಣದ ಮಹತ್ವವನ್ನು ಸಾರುತ್ತದೆ. ಬಡ ಕುಟುಂಬಗಳಲ್ಲೂ ಸಹ ಹೆಣ್ಣು ಮಕ್ಕಳಿಗೆ ಮದುವೆಗೆ ವರ ಸಿಕ್ಕಲು ಸಹಾಯವಾಗುವುದೆಂಬ ಕಾರಣಕ್ಕೆ ಶಿಕ್ಷಣ ಕೊಡಿಸಲು ಮುಂದಾಗುವ ಹೆತ್ತವರ ಪಾತ್ರ ಚಿತ್ರಣವಿದೆ. ಅಧಿಕಾರಿಯ ಹೆಂಡತಿ ಹೇಳುವ "ನಮ್ಮ ಹೆಣ್ಣು ಮಕ್ಕಳನ್ನು ಅಷ್ಟು ದೂರದ ಕಾಲೇಜಿಗೆ ಕಳುಹಿಸಲು ಸಾಧ್ಯವೇ? ಈಗಿನ ಕಾಲದಲ್ಲಿ ಕಾಲೇಜಿನಲ್ಲಿ ಓದದ ಹೆಣ್ಣು ಮಕ್ಕಳಿಗೆ ವರ ಸಿಗುತ್ತದೆಯೇ?"[6] ಎಂಬ ಮಾತು ಸ್ತ್ರೀ ಶಿಕ್ಷಣಕ್ಕೆ ಇರುವ ಶಕ್ತಿಯನ್ನು ಮೂಡಿಸುತ್ತದೆ.

ಹೆಣ್ಣು ಶಿಕ್ಷಣವಂತಳಾಗಿದ್ದರೆ ಉದ್ಯೋಗ ಪಡೆದು ಸಂಸಾರದ ಜವಾಬ್ದಾರಿಯನ್ನು ಹೊರುವ ಸಾಮರ್ಥ್ಯ ಅವಳಲ್ಲಿರುತ್ತದೆ ಎಂಬ ಗಂಡು ಹೆತ್ತವರಲ್ಲಿನ ಸಕಾರಾತ್ಮಕ ನಿಲುವುಗಳು ಒಂದೆಡೆಯಾದರೆ, ಓದಿರುವ ಹುಡುಗಿ ಎಲ್ಲಿ ತಮ್ಮ ಮಾತಿನ ಪ್ರಕಾರ ನಡೆದುಕೊಳ್ಳದೇ, ತಮ್ಮನ್ನು ಎದುರಿಸುವ ಮಟ್ಟಕ್ಕೆ ತಲುಪುವಳೋ ಎಂಬ ಭಯ ಓದಿರದ ಹುಡುಗಿಯನ್ನು ಮದುವೆ ಮಾಡಿಕೊಳ್ಳಲು ಮುಂದಾಗುವ ಗಂಡುಗಳ ಮನಸ್ಸಿನಲ್ಲಿರುತ್ತದೆ. ಒಟ್ಟಿನಲ್ಲಿ ಮೂಲತಃ ಮುಸ್ಲಿಂ ಸಮುದಾಯದಲ್ಲಿ ಸ್ತ್ರೀ ಶಿಕ್ಷಣಕ್ಕೆ ಬೆಂಬಲವಿದೆ. ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುವಲ್ಲಿ ತಾಯಿಯ ಪಾತ್ರವೇ ಪ್ರಧಾನವೆಂದರಿತ ಪೈಗಂಬರರು ಇಂದಿನ ಹೆಣ್ಣು ಮಕ್ಕಳೆ ನಾಳಿನ ತಾಯಂದಿರಾದ ಕಾರಣ ಸ್ತ್ರೀ ಶಿಕ್ಷಣವನ್ನು ಪ್ರೋತ್ಸಾಹಿಸಿದ್ದರೆಂದು ಸಾರಾ ಅವರು ತಿಳಿಸುತ್ತಾರೆ. ಚೀನಾ ದೇಶ 7ನೇ ಶತಮಾನದಲ್ಲೇ ಶೈಕ್ಷಣಿಕವಾಗಿ ಮುಂದುವರಿದಿದ್ದರಿಂದ ಹೆಣ್ಣು–ಗಂಡುಗಳೆಲ್ಲರೂ ಅರಬ್ ದೇಶದಿಂದ ಚೀನಾದವರೆಗೂ ಪ್ರಯಾಣ ಮಾಡಿ ವಿದ್ಯೆ ಸಂಪಾದಿಸಬೇಕೆಂದು ಪ್ರವಾದಿಗಳೇ ಹೇಳಿದ್ದನ್ನು ತಿಳಿಸುತ್ತಾರೆ.

ಒಟ್ಟಾರೆಯಾಗಿ ಮುಸ್ಲಿಂ ಮಹಿಳೆಯರ ಶೈಕ್ಷಣಿಕ ಹಕ್ಕನ್ನೇ ಕಸಿದಿರುವ ಪುರುಷ ಮತಾಂತರು ತಮ್ಮ ಧರ್ಮಕ್ಕೆ ವಿರೋಧವಾಗಿ ನಡೆದುಕೊಳ್ಳುತ್ತಿದ್ದರೆಂಬುದು ಸಾರಾ ಅಬೂಬಕ್ಕರ್ ಅವರ ಅಭಿಪ್ರಾಯವಾಗಿದೆ. ಶಿಕ್ಷಣ ಸಮಾಜದ ಎಲ್ಲಾ ಜಾತಿಯವರಿಗೆ, ವರ್ಗದವರಿಗೆ, ಲಿಂಗದವರಿಗೆ ದೊರಕಬೇಕೆಂಬುದು ಇವರ ಸಂದೇಶವಾಗಿದೆ.

## ಕೊನೆ ಟಿಪ್ಪಣಿಗಳು:

1. ಸಾರಾ ಅಬೂಬಕರ್, (2019), ಚಂದ್ರಗಿರಿ ತೀರದಲ್ಲಿ, ಚಂದ್ರಗಿರಿ ಪ್ರಕಾಶನ, ಮಂಗಳೂರು, ಪು.ಸಂ. 28
2. ಸಾರಾ ಅಬೂಬಕರ್, (1985), ಸಹನಾ, ಚಂದ್ರಗಿರಿ ಪ್ರಕಾಶನ, ಮಂಗಳೂರು, ಪು.ಸಂ. 2
3. ಸಾರಾ ಅಬೂಬಕರ್, (1988), ಕದನ ವಿರಾಮ, ಚಂದ್ರಗಿರಿ ಪ್ರಕಾಶನ, ಮಂಗಳೂರು, ಪು.ಸಂ. 113
4. ಸಾರಾ ಅಬೂಬಕರ್, (1998), ಇಳಿಜಾರು, ಚಂದ್ರಗಿರಿ ಪ್ರಕಾಶನ, ಮಂಗಳೂರು, ಪು.ಸಂ. 156
5. ಅದೇ, ಪು.ಸಂ. 36
6. ಸಾರಾ ಅಬೂಬಕರ್, (1997), ತಳ ಒಡೆದ ದೋಣಿ, ಚಂದ್ರಗಿರಿ ಪ್ರಕಾಶನ, ಮಂಗಳೂರು, ಪು.ಸಂ. 140

## ಪರಾಮರ್ಶನ ಗ್ರಂಥಗಳು:


1. ದಳವಾಯಿ ಕೆ.ಟಿ., (2006), ಕಥೆ–ಕಾದಂಬರಿಗಳಲ್ಲಿ ಮುಸ್ಲಿಂ ಮಹಿಳಾ ಸಂವೇದನೆ, ಕರ್ನಾಟಕ ವಿ.ವಿ., ಧಾರವಾಡ.
2. ಸಾರಾ ಅಬೂಬಕರ್, (1985), ಸಹನಾ, ಚಂದ್ರಗಿರಿ ಪ್ರಕಾಶನ, ಮಂಗಳೂರು.
3. ಭೀಮಣ್ಣ ಎಚ್., (2011,) ನವಕಾದಂಬರಿಗಳ ಅವಲೋಕನ, ಶ್ರೀ ಬಲಭೀಮ್ ಪ್ರಕಾಶನ, ರಾಸಣಗಿ.
4. ವಾಲಿಕಾರ್ ಚನ್ನಣ್ಣ, (2002), ಸಮಗ್ರ ಕಾದಂಬರಿ ಸಂಪುಟ: ದಲಿತ, ಬಂಡಾಯ ಸಾಹಿತ್ಯ ಪ್ರಕಾಶನ, ಕಲಬುರ್ಗಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.